**1 ನೇ ಹೆಚ್ಚುವರಿ ಸತ್ರ ಮತ್ತು ವಿಶೇಷ ನ್ಯಾಯಾಲಯ, ಚಿಕ್ಕಮಗಳೂರು**

**ವಿಶೇಷ ಮೊಕದ್ದಮೆ ನಂಃ 99/2023**

| | | |
|---|---|---|
| ಸಾಕ್ಷಿದಾರರ ಹೆಸರು | - ಶ್ರೀನಿಧಿ | ಪಿಡಬ್ಲ್ಯೂ- 02 |
| ತಂದೆಯ ಹೆಸರು | - ಕೃಷ್ಣಯ್ಯನ್ | ಸಿಡಬ್ಲ್ಯೂ -02 |
| ವಯಸ್ಸು | - 24 ವರ್ಷ | |
| ಉದ್ಯೋಗ | - ವೈನ್ಸ್ ಅಂಗಡಿಯಲ್ಲಿ ಕ್ಯಾಶಿಯರ್ | |
| ವಾಸ ಸ್ಥಳ | - ಮಂಗಳೂರು | |

ದಿನಾಂಕಃ 16.07.2026 ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದ-

1. ಆರೋಪಿತರು, ಚಾಸಾ.1 ಮತ್ತು 3 ಗೊತ್ತು.

2. ದಿಃ 04-05-2023 ರಂದು ಮೂಡಿಗೆರೆಯ ಕುನ್ನಳ್ಳಿಯ ಗ್ರಾಮದ ಸರ್ವೆ ನಂಬರು.14 ರಲ್ಲಿ ನಾನು ಮತ್ತು ಚಾಸಾ.3 ಹೋಗುತ್ತಿದ್ದಾಗ ಪೊಲೀಸರು ಮಹಜರಿಗೆ ಬರುವಂತೆ ಹೇಳಿದ್ದರು. ಈಗ ತೋರಿಸಿದ ದಾಖಲಾತಿಯಲ್ಲಿ ನನ್ನ ಸಹಿ ಇದ್ದು, ಅದನ್ನು ನಿಪಿ.5 ಎಂದು ಹಾಗೂ ಅದರಲ್ಲಿರುವ ನನ್ನ ಸಹಿಯನ್ನು ನಿಪಿ.5(ಎ) ಎಂದು ಗುರುತಿಸಲಾಯಿತು.

3. ಈಗ ತೋರಿಸಿದ ಇನ್ನೊಂದು ದಾಖಲಾತಿಯಲ್ಲಿ ನನ್ನ ಸಹಿ ಇದ್ದು, ಸದರಿ ದಾಖಲಾತಿಯನ್ನು ಈಗಾಗಲೇ ನಿಪಿ.2 ಎಂದು ಗುರುತಿಸಲಾಗಿದ್ದು ಅದರಲ್ಲಿರುವ ನನ್ನ ಸಹಿಯನ್ನು ನಿಪಿ.2(ಎ) ಎಂದು ಗುರುತಿಸಲಾಯಿತು.

4. ಸದರಿ ಮಹಜರನ್ನು ಬೆಳಿಗ್ಗೆ 11 ಗಂಟೆಯಿಂದ 12 ಗಂಟೆಯವರೆಗೆ ಬರೆಯಲಾಗಿದೆ. ಆ ಸಂದರ್ಭದಲ್ಲಿ ತೆಗೆಯಲಾದ ಭಾವಚಿತ್ರದಲ್ಲಿ ನಾನು, ಚಾಸಾ.1 ಮತ್ತು ಚಾಸಾ.3 ಇರುವುದು ಕಂಡುಬರುತ್ತದೆ. ಸದರಿ ಭಾವಚಿತ್ರಗಳನ್ನು ನಿಪಿ.3 ಮತ್ತು ಪಿ.4 ಎಂದು ಈಗಾಗಲೇ ಗುರುತಿಸಲಾಗಿದೆ. ಸದರಿ ಸ್ಥಳವನ್ನು ತನ್ನ ಮೇಲೆ ಹಲ್ಲೆಯವಾದ ಜಾಗ ಎಂದು ಚಾಸಾ.1 ತೋರಿಸಿರುತ್ತಾರೆ.

<u>ಪಾಟೀ ಸವಾಲು: ಆರೋಪಿತರ ಪರವಾಗಿ ಶ್ರೀ ಡಿ.ಆರ್.ಸಿ. ವಕೀಲರಿಂದಃ-</u>

5. ಚಾಸಾ.1 ನಮ್ಮ ಊರಿನವರು. ನಮ್ಮಿಬ್ಬರ ಮನೆಗಳು ಒಂದೇ ಪ್ರದೇಶದಲ್ಲಿರುತ್ತವೆ. ನಾನು ಮೊದಲನೇ ವರ್ಷದ ಪದವಿಯವರೆಗೆ ಓದಿರುತ್ತೇನೆ.

6. ಪೊಲೀಸರು ನನಗೆ ದಿಃ 04-05-2023 ರಂದು ನೋಟೀಸು ನೀಡಿದ್ದರು. ನೋಟೀಸನ್ನು ಜಾಗದಲ್ಲಿಯೇ ನೀಡಿರುತ್ತಾರೆ. ಆ ಸಂದರ್ಭದಲ್ಲಿ ನಾನು ಕೆಲಸದಲ್ಲಿ ಇರಲಿಲ್ಲ. ಆ ಸಂದರ್ಭದಲ್ಲಿ ನಾನು ತೋಟದಲ್ಲಿ ಬಾಳೆಹೊನ್ನೂರು ಕಡೆ ಅಡಿಕೆ ಸ್ಪ್ರೇ ಕೆಲಸ ಮಾಡುತ್ತಿದ್ದೆ. ನಾನು ಬೆಳಿಗ್ಗೆ 6.30 ಗಂಟೆಗೆ ಹೋದರೆ ಮಧ್ಯಾಹ್ನ 3.30 ಗಂಟೆಗೆ ವಾಪಸ್ ಆಗುತ್ತಿದ್ದೆ. ಆ ದಿನ ನಾನು ಕೆಲಸಕ್ಕೆ ಹೋಗಿರಲಿಲ್ಲ.

7. ಆ ಸಂಭರ್ಧದಲ್ಲಿ ನಾನು, ನನ್ನ ಗೆಳೆಯ ಮತ್ತು ಊರಿನ 3-4 ಜನರು ಸೇರಿದ್ದರು. ಸರ್ವೆ ನಂಬರು 14 ರಲ್ಲಿ ಜಯಪಾಲನಿಗೆ ಸೇರಿದ ಜಮೀನು ಇರುತ್ತದೆ. ಸದರಿ ಸರ್ವೆ ನಂಬರಿನಲ್ಲಿ ಕಾಫಿ ಮತ್ತು ಅಡಿಕೆ ಬೆಳೆದಿರುತ್ತಾರೆ. ಅವೆಲ್ಲವು ದೊಡ್ಡ ಗಿಡಗಳು ಎಂದರೆ ಸರಿ. ಬರವಣಿಗೆಯನ್ನು ಸ್ಥಳದಲ್ಲಿಯೇ ಮಾಡಿದ್ದು ನಾನು ಓದಿ

ನೋಡಿರುತ್ತೇನೆ.

8. ಅಲ್ಲಿ ಒಂದು ಹಳ್ಳ ಇದ್ದು, ಅದು ಸ್ಥಳದಿಂದ 10 ಮೀಟರ್ ದೂರದಲ್ಲಿರುತ್ತದೆ. ಮಹಜರಿನಲ್ಲಿ ಹಳ್ಳ ಇರುವ ಕುರಿತು ಬರೆದಿರುವುದಿಲ್ಲ. ಆ ದಿನ ನಾನು ಸ್ಥಳಕ್ಕೆ ಹೋಗಿದ್ದೆ ಮತ್ತು ನನ್ನ ಸಮಕ್ಷಮ ಚಾಸಾ.1 ಜಾಗ ತೋರಿಸಿದ್ದರು ಮತ್ತು ನನ್ನ ಸಮಕ್ಷಮ ಪೊಲೀಸರು ಮಹಜರ್ ಬರೆದಿದ್ದರು ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ನಾನು ಸಹಿಯನ್ನು ಠಾಣೆಯಲ್ಲಿ ಹಾಕಿರುತ್ತೇನೆ ಎಂದರೆ ಸರಿಯಲ್ಲ. ಈ ಪ್ರಕರಣಕ್ಕೆ ಅನುಕೂಲವಾಗುವಂತೆ ಫೋಟೋಗಳನ್ನು ಪೊಲೀಸರು ತೆಗೆದಿರುತ್ತಾರೆ ಎಂದರೆ ಸರಿಯಲ್ಲ.

9. ನಾನು ಮತ್ತು ಚಾಸಾ.1 ಒಂದೇ ಕಡೆ ವಾಸಿಸುತ್ತಿದ್ದರಿಂದ ಆತನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮಹಜರಿನಲ್ಲಿ ಬರೆದಿರುವ ವಿಷಯಗಳ ಬಗ್ಗೆ ನನಗೆ ಮಾಹಿತಿ ಇಲ್ಲ ಮತ್ತು ತಿಳಿದಿದೆ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲ.</u>

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಕಿರಣ್ ಕಿಣಿ)
1 ನೇ ಅಪರ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಚಿಕ್ಕಮಗಳೂರು.

ಸಾಕ್ಷಿಯ ಸಹಿ